ಶ್ರೀ ಗುರುಭ್ಯೋ ನಮ: ಹರಿ: ಶ್ರೀ೦

ಗುರು ಕರುಣ ಕವಚ (ನಕ್ಷತ್ರ ಮಾಲಾ)

**********************************

ಸ್ಮರಿಸಿ ಬದುಕಿರೊ ಪಂಢರಿ | ನಾಥದಾಸರ
ಸ್ಮರನ ಪಿತನ ಪ್ರೀತಿಗೆ | ಪಾತ್ರರಾದರ || **(1)**

ಗುರುಗೋವಿಂದರ ಶಿಷ್ಯ | ತಾನು ಎನಿಸಿದ |
ಚರಣ ರಜವಾಶ್ರಯಿಸಿ | ಅವರ ಸೇವಿಸಿದ || **(2)**

ಸೀತಾರಾಮ ಸೀತಮ್ಮ | ಉದರದಲ್ಲಿ |
ಈತಜನಿಸಿರಲೂ ಮುನ್ನ | ಪುಣ್ಯದಿಂದಲಿ || **(3)**

ಬಾಲ್ಯದಲ್ಲಿ ತಂದೆಯನ್ನು | ಕಳೆದುಕೊಂಡನು |
ಬಾಲಕ ರಾಘವೇಂದ್ರನು | ದೈನ್ಯ ಬಟ್ಟನು || **(4)**

ಬಾಲ್ಯದಲ್ಲಿ ತಾಕಷ್ಟ | ದಿಂದ ಓದುತ |
ಶೀಲ ಕುವರ ತಾನು | ಪ್ರಾಣನ ಸೇವಿಸುತ || **(5)**

ಕಾಲಕಳೆಯಲು ಮಂ | ತ್ರಾಲಯ ಗುರುವು |
ಭಾಳ ಅನುಗ್ರಹ ಮಾಡಲು | ಗುರುವು ದೊರಕಲು ||**(6)**

ಗುರುಗೋವಿಂದ ದಾಸರಲಿ | ಅಂಕಿತವನ್ನು |
ಹರುಷದಲಿ ಪೊಂದಿತಾ | ಹರುಷ ಬಟ್ಟನು || **(7)**

ಮಂದಹಾಸ ದಿವ್ಯ ಕಳೆ | ಯಿಂದ ಬೆಳಗುತ |
ಕಂಧರದಲಿ ತುಳಸಿಮಣಿ | ಮಾಲೆ ಒಪ್ಪಲು || **(8)**

ಬೆಟ್ಟದೊಡೆಯನ ದಯದಲ್ಲಿ | ಕಷ್ಟ ನೀಗುತ |
ನಿಷ್ಠೆಯಿಂದ ಹರಿಗುರುಗಳ | ಮುಟ್ಟಿ ಭಜಿಸುತ || **(9)**

ನವವಿಧದ ಭಕುತಿಯಲಿ| ಹರಿಯ ಸೇವಿಸಿ |
ಕವನಗಳ ರಚಿಸುತಿರಲು | ಕವಿ ಗಳೆನಿಸಿದ || **(10)**

ಶ್ರೀನಿವಾಸ ವಿಜಯ ರಚಿಸಿ | ಸಾನುರಾಗದಿ |
ಶ್ರೀನಿವಾಸಪ್ರಿಯ ದಾಸ | ಪುರಂದರರಾ || **(11)**

ಗಾನದಿ ಹರಿಯ ಕೊಂಡಾಡಿ | ಧನ್ಯನೆನಿಸುತ |
ಮಾನ್ಯ ಮಾನದ ಹರಿಯೇ | ಕಾರಣ ವೆನ್ನುತ || **(12)**

ನಂದತೀರ್ಥರ ಮನ | ಮಂದಿರ ಹರಿಯನು |
ನಂದದಲಿ ಪೂಜಿಸುತ | ನಂದ ಪಡುವರೊ || **(13)**

ತೀರ್ಥಕ್ಷೇತ್ರಗಳ ಕೃ | ತಾರ್ಥ ಭಾವದಿ |
ಭಕ್ತಿಯಿಂದ ಚರಿಸಿ ತಾ | ಧನ್ಯನಾದನು || **(14)**

ನಿಷ್ಠೆಯಿಂದ ಭಜಿಪರ | ಕಷ್ಟ ಕಳೆಯುತ |

ಶ್ರೇಷ್ಠ ಗುರುವು ತಾನಾಗಿ | ಶಿಷ್ಯರ ಪೊರೆಯುತ ||(15)

ಭಕ್ತನೋರ್ವ ನ ಭೂತ | ಬಾಧೆ ಬಿಡಿಸಿದ |

ಶಕ್ತ ವಿಠಲನ ದಯದಿ ವಿ | ರಕ್ತ ಗುರುವುತಾ || (16)

ಆರ್ತ ಜನರ ಅಭಿ | ಲಾಷೆ ಪೂರ್ತಿಸುವ |

ಸಾರ್ಥಕ ಬದುಕು ಬಾಳಿದ | ಕೀರ್ತಿಶೇಷರ || (17)

ಅಲವ ಬೋಧರ ತತ್ವವ | ತಿಳಿಯುವಂದದಿ |

ಸುಲಭದಲ್ಲಿ ತಿಳಿಸುತ | ತಿಳಿವು ನೀಡ್ದರ || (18)

ಶಿಷ್ಯರನ್ನು ಕೂಡಿಕೊಂಡು | ನಿಷ್ಠೆಯಿಂದಲಿ |

ಎಷ್ಟೋ ಆರಾಧನೆಗಳ | ತಾನು ಮಾಡುವ || (19)

ರಾಘವೇಂದ್ರರಾಯರ | ಅಂತರಂಗ ಭಕ್ತರು |

ರಾಘವ ರಾಮನ ಕಾರುಣ್ಯ ಪಾತ್ರರು || (20)

ಸನ್ಮಾನ ಪೊಂದಿಹರು |ತಿಮ್ಮಪ್ಪನ ಸನ್ನಿಧಿಲಿ |

ಮಾನ್ಯ ಗುರುಗಳ | ಒಮ್ಮನದಿ ಸೇವಿಸಿರೊ || (21)

ಸರಳ ಮನಸಿನ ಇವರ | ನಿಜಮನದಿ ಸೇವಿಸಲು |

ಮುರಳಿಗಾನ ಮಾಡುವ | ಶ್ರೀಕೃಷ್ಣ ಒಲಿವನು || (22)

ಮಂದಮತಿಗಳು ಇವರನು | ಅರಿಯಬಲ್ಲರೇ

ಇಂದಿರೆರಮಣನ ಶ್ರೀ | ಹರಿಯದಾಸರಾಯರ || (23)

ತಂದೆಯಂತಿಹ ಪಂಢರಿ | ನಾಥದಾಸರ |

ಎಂದೆಂದಿಗೂ ಪಾದ | ಪೊಂದಿ ಸುಖಿಸಿ ರೊ || (24)

ಭಕ್ತಿ ಯೋಗಿಗಳನು ನಾ | ನೆಂತು ವರ್ಣಿಪೆನೊ |

ಶಕ್ತ ವಿಠಲನು ತಾನೇ | ನಿಂತು ನುಡಿಸಿದ || (25)

ಶ್ರೇಷ್ಠ ಕೃಷ್ಣಾಷ್ಟಮಿ ವಿ | ಶಿಷ್ಟ ದಿನದಲಿ |

ವಿಠಲನೆಡೆಗೆ ತಾ ನಡೆದನು | ವಿಠಲ ನೆನುತಲಿ || (26)

ಗುರು ಕರುಣ ಕವಚವನ್ನು | ದಿನವು ಪಠಿಸಲು |

ಹರಿಗುರು ಶ್ರೀರಮಾಧವ | ವಿಠಲ ಕಾಯ್ವನು || (27)

***************************************

ಗುರುಗಳಂತರ್ಯಾಮಿ ಶ್ರೀ ಹರಿ ಪ್ರೀತನಾಗಲಿ ಮದ್ವೇಶ ಶ್ರೀ ಕೃಷ್ಣಾ ರ್ಪಣಮಸ್ತು 🙏🙏🙏🙏🙏